**ಕರ್ನಾಟಕ ಸರ್ಕಾರ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು**
**ನೋವೆಲ್ ಕರೋನಾ ವೈರಸ್ (ಕೋವಿಡ್–19)**
**ಪತ್ರಿಕಾ ಪ್ರಕಟಣೆ**

**ದಿನಾಂಕ:05.04.2020** **ಸಂಜೆಯ ವರದಿ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ 208 ದೇಶ / ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್ನನ್ನು (ಕೋವಿಡ್–19) ಅಂತರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್ಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11ನೇ ಮಾರ್ಚ್ 2020ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19ನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಕ್ರಮಗಳನ್ನು ಎಲ್ಲಾ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣ ಹಿನ್ನಲೆ ಹೊಂದಿರುವ ಎಲ್ಲರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ದಿನಾಂಕ 05.04.2020, ಸಾಯಂಕಾಲ 5.00 ಗಂಟೆಯ ವರದಿಯಂತೆ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 151 ಕೋವಿಡ್–19 ಖಚಿತಪಟ್ಟ ಪ್ರಕರಣಗಳು, ಅವುಗಳಲ್ಲಿ 4 ಮರಣ ಮತ್ತು 12 ಜನ ಬಿಡುಗಡೆ ಹೊಂದಿರುತ್ತಾರೆ."**

- ಕೋವಿಡ್–19 ಪೀಡಿತ ಒಟ್ಟು 135 ವ್ಯಕ್ತಿಗಳಲ್ಲಿ, 132 ರೋಗಿಗಳು (ಒಬ್ಬರು ಗರ್ಭಿಣಿಯಾಗಿದ್ದು) ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯವು ಸ್ಥಿರವಾಗಿರುತ್ತದೆ ಹಾಗೂ ಮೂವರನ್ನು ಐ.ಸಿ.ಯು.ನಲ್ಲಿ (ಪಿ.43 ಆಕ್ಸಿಜನ್ ನಲ್ಲಿ ಮತ್ತು ಪಿ.101 & ಪಿ.102 ರನ್ನು ವೆಂಟಿಲೇಟರ್‌ನಲ್ಲಿ) ಇಡಲಾಗಿರುತ್ತದೆ.
- ದಿನಾಂಕ 04.04.2020, ಸಂಜೆ 5:00 ರಿಂದ ದಿನಾಂಕ 05.04.2020 ಸಂಜೆ 5:00 ರವರೆಗೆ ರಾಜ್ಯದಲ್ಲಿ 7 ಹೊಸ ಕೋವಿಡ್ –19 ಪೀಡಿತರು ಪತ್ತೆಯಾಗಿದ್ದು, ವರದಿಯು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರಕರಣ ಸಂಖ್ಯೆ | ವಯಸ್ಸು | ಲಿಂಗ | ವಿಳಾಸ | ಹಿನ್ನಲೆ | ಪ್ರತ್ಯೇಕಿಸಿದ ಆಸ್ಪತ್ರೆ |
|---|---|---|---|---|---|---|
| 1 | P 145 –Q | 68 | ಗಂಡು | ಬೆಂಗಳೂರು | ದುಬೈಗೆ ಪ್ರಯಾಣ ಮಾಡಿರುವ ಹಿನ್ನಲೆ ಹೊಂದಿದ್ದು, ದಿನಾಂಕ 22.03.2020 ರಂದು ಭಾರತಕ್ಕೆ ಹಿಂದಿರುಗಿರುತ್ತಾರೆ. | ಆಕಾಶ್ ಆಸ್ಪತ್ರೆ, ಬೆಂಗಳೂರು ಗ್ರಾಮಾಂತರದಲ್ಲಿ ಕ್ವಾರನ್‌ಟೈನ್ ಆಗಿದ್ದು, ಇಲ್ಲಿಯವರೆಗೆ ಇವರಿಗೆ ರೋಗ ಲಕ್ಷಣಗಳು ಇರುವುದಿಲ್ಲ. |
| 2 | P146 - Q | 62 | ಹೆಣ್ಣು | ಬೆಂಗಳೂರು | (P145 ರ ಪತ್ನಿ) ದುಬೈಗೆ ಪ್ರಯಾಣ ಮಾಡಿರುವ ಹಿನ್ನಲೆ ಹೊಂದಿದ್ದು, ದಿನಾಂಕ 22.03.2020 ರಂದು ಭಾರತಕ್ಕೆ ಹಿಂದಿರುಗಿರುತ್ತಾರೆ. | ಆಕಾಶ್ ಆಸ್ಪತ್ರೆ, ಬೆಂಗಳೂರು ಗ್ರಾಮಾಂತರದಲ್ಲಿ ಕ್ವಾರನ್‌ಟೈನ್ ಆಗಿದ್ದು, ಇಲ್ಲಿಯವರೆಗೆ ಇವರಿಗೆ ರೋಗ ಲಕ್ಷಣಗಳು ಇರುವುದಿಲ್ಲ. |
| 3 | P147-TJ | 36 | ಹೆಣ್ಣು | ರಾಯ್‌ಬಾಗ್, ಬೆಳಗಾವಿ | ದಿನಾಂಕ 13 ರಿಂದ 18ನೇ ಮಾರ್ಚ್ 2020 ರಲ್ಲಿ ನವ ದೆಹಲಿಯಲ್ಲಿ ನಡೆದ ಟಿ.ಜೆ. ಧರ್ಮಸಭೆಯಲ್ಲಿ ಭಾಗವಹಿಸಿದ್ದು, ದಿನಾಂಕ 20.03.2020 ರಂದು ವಾಪಸ್ಸಾಗಿರುತ್ತಾರೆ. | ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. |

| | | | | | | |
|---|---|---|---|---|---|---|
| 4 | P148-TJ | 40 | ಗಂಡು | ರಾಯ್‌ಬಾಗ್, ಬೆಳಗಾವಿ | ದಿನಾಂಕ 13 ರಿಂದ 18ನೇ ಮಾರ್ಚ್ 2020 ರಲ್ಲಿ ನವ ದೆಹಲಿಯಲ್ಲಿ ನಡೆದ ಟಿ.ಜೆ. ಧರ್ಮಸಭೆಯಲ್ಲಿ ಭಾಗವಹಿಸಿದ್ದು, ದಿನಾಂಕ 20.03.2020 ರಂದು ವಾಪಸ್ಸಾಗಿರುತ್ತಾರೆ. | ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. |
| 5 | P149-TJ | 67 | ಹೆಣ್ಣು | ರಾಯ್‌ಬಾಗ್, ಬೆಳಗಾವಿ | ದಿನಾಂಕ 13 ರಿಂದ 18ನೇ ಮಾರ್ಚ್ 2020 ರಲ್ಲಿ ನವ ದೆಹಲಿಯಲ್ಲಿ ನಡೆದ ಟಿ.ಜೆ. ಧರ್ಮಸಭೆಯಲ್ಲಿ ಭಾಗವಹಿಸಿದ್ದು, ದಿನಾಂಕ 20.03.2020 ರಂದು ವಾಪಸ್ಸಾಗಿರುತ್ತಾರೆ. | ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. |
| 6 | P150-TJ | 41 | ಹೆಣ್ಣು | ರಾಯ್‌ಬಾಗ್, ಬೆಳಗಾವಿ | ದಿನಾಂಕ 13 ರಿಂದ 18ನೇ ಮಾರ್ಚ್ 2020 ರಲ್ಲಿ ನವ ದೆಹಲಿಯಲ್ಲಿ ನಡೆದ ಟಿ.ಜೆ. ಧರ್ಮಸಭೆಯಲ್ಲಿ ಭಾಗವಹಿಸಿದ್ದು, ದಿನಾಂಕ 20.03.2020 ರಂದು ವಾಪಸ್ಸಾಗಿರುತ್ತಾರೆ. | ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. |
| 7 | P151-TJ & Q | 41 | ಗಂಡು | ಬಳ್ಳಾರಿ | ದಿನಾಂಕ 13 ರಿಂದ 18ನೇ ಮಾರ್ಚ್ 2020 ರಲ್ಲಿ ನವ ದೆಹಲಿಯಲ್ಲಿ ನಡೆದ ಟಿ.ಜೆ. ಧರ್ಮಸಭೆಯಲ್ಲಿ ಭಾಗವಹಿಸಿರುತ್ತಾರೆ. | ಎಂ.ಡಿ.ಆರ್.ಎಸ್., ಬಳ್ಳಾರಿ ಯಲ್ಲಿ ಕ್ವಾರನ್‌ಟೈನ್ ಮಾಡಲಾಗಿದ್ದು, ಇಲ್ಲಿಯವರೆಗೆ ಇವರಿಗೆ ರೋಗ ಲಕ್ಷಣಗಳು ಇರುವುದಿಲ್ಲ. |

**District wise Abstract of COVID-19**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಒಟ್ಟು ಸೋಂಕಿತರ ಸಂಖ್ಯೆ | ಒಟ್ಟು ಬಿಡುಗಡೆಯಾದ ಸಂಖ್ಯೆ | ಸಕ್ರಿಯ ಪ್ರಕರಣಗಳು | ಒಟ್ಟು ಮರಣ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 57 | 10* | 46 | 1 |
| 2 | ಮೈಸೂರು | 28 | 0 | 28 | 0 |
| 3 | ದಕ್ಷಿಣ ಕನ್ನಡ | 12 | 0 | 12 | 0 |
| 4 | ಉತ್ತರ ಕನ್ನಡ | 8 | 0 | 8 | 0 |
| 5 | ಚಿಕ್ಕಬಳ್ಳಾಪುರ | 7 | 0 | 7 | 0 |
| 6 | ಕಲಬುರ್ಗಿ | 5 | 2 | 2 | 1 |
| 7 | ಬಳ್ಳಾರಿ | 6 | 0 | 6 | 0 |
| 8 | ದಾವಣಗೆರೆ | 3 | 0 | 3 | 0 |
| 9 | ಉಡುಪಿ | 3 | 0 | 3 | 0 |
| 10 | ದಾರವಾಡ | 1 | 0 | 1 | 0 |
| 11 | ಕೊಡಗು | 1 | 0 | 1 | 0 |
| 12 | ತುಮಕೂರು | 1 | 0 | 0 | 1 |
| 13 | ಬೀದರ್ | 10 | 0 | 10 | 0 |
| 14 | ಬಾಗಲಕೋಟೆ | 1 | 0 | 0 | 1 |
| 15 | ಬೆಳಗಾವಿ | 7 | 0 | 7 | 0 |
| 16 | ಬೆಂಗಳೂರು ಗ್ರಾಮಾಂತರ | 1 | 0 | 1 | 0 |
| ಒಟ್ಟು | | **151** | **12*** | **135** | **4** |

*ಆಸ್ಪತ್ರೆಯಿಂದ ಬಿಡುಗಡೆ – **P1, P2, P3, P4, P5, P7, P8, P9, P10, P11, P12** ಮತ್ತು **P14**

ಮರಣ – **P6, P53, P60 & P125**

ಈ ಎಲ್ಲಾ ಕೋವಿಡ್–19 ಸೋಂಕಿತ ವ್ಯಕ್ತಿಗಳ ಸಂಪರ್ಕದಲ್ಲಿರುವವರನ್ನು ಪತ್ತೆ ಹಚ್ಚಲಾಗುತ್ತಿದೆ.

**ಸೂಚನೆ:** ಕರ್ನಾಟಕದಲ್ಲಿ ಒಟ್ಟು ಪತ್ತೆ ಮಾಡಲಾಗಿರುವ **151** ಪ್ರಕರಣಗಳಲ್ಲಿ **8** ಪ್ರಕರಣಗಳು ಕೇರಳದವರಾಗಿದ್ದು, ಅವರು ಕರ್ನಾಟಕದ ವಿಮಾನ ನಿಲ್ದಾಣಗಳಿಗೆ ಆಗಮಿಸಿ, ಅವರು ಕರ್ನಾಟಕದಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ದಿನಾಂಕ **04–04–2020** ರಂದು **86** ಜನರನ್ನು ಮಂಗಳೂರು ಕಡಲು ಬಂದರಿನಲ್ಲಿ ತಪಾಸಣೆ ಮಾಡಲಾಗಿದೆ.

| ABSTRACT | | | |
|---|---|---|---|
| | **ಚಟುವಟಿಕೆಗಳು** | **ಇಂದಿನ** | **ಸಂಚಿತ** |
| **A** | ನಿಗಾವಣೆಯಲ್ಲಿರುವ ಒಟ್ಟು ಅಂತರರಾಷ್ಟ್ರೀಯ ಪ್ರಯಾಣಿಕರು | | |
| | ಮನೆ ಕ್ವಾರನ್‌ಟೈನ್ ರಡಿ | 516 | |
| | ವರದಿ ಸಂಪರ್ಕ ಸಮಯದಲ್ಲಿ | 23359 | |
| **B** | ನಿಗಾವಣೆಯಲ್ಲಿರುವ ಒಟ್ಟು ಸಂಪರ್ಕ ವ್ಯಕ್ತಿಗಳು | | |
| | ಪ್ರಥಮ | 1469 | |
| | ದ್ವಿತೀಯ | 5165 | |
| **C** | **ನಿಗಾವಣೆಯಲ್ಲಿರುವ ಒಟ್ಟು ವ್ಯಕ್ತಿಗಳು** | **30509** | |
| **D** | ಆರೋಗ್ಯ ಕೇಂದ್ರಗಳಲ್ಲಿನ ಒಟ್ಟು ಪ್ರತ್ಯೇಕಿತ ವ್ಯಕ್ತಿಗಳು | 56 | 406 |
| **E** | ಪರೀಕ್ಷಣೆಗಾಗಿ ಪಡೆದ ಒಟ್ಟು ಮಾದರಿಗಳು | 482 | 5543 |
| **F** | ನೆಗೆಟಿವ್ ವರದಿಯಾದ ಒಟ್ಟು ಮಾದರಿಗಳು | 471 | 5037 |
| | **ಕೋವಿಡ್–19 ಖಚಿತವಾದ (ಪಾಸಿಟಿವ್) ಒಟ್ಟು ಮಾದರಿಗಳು** | **7** | **151** |

| ನಿಗದಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ | | | | |
|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಂದಿನ ಹೊಸ ದಾಖಲಾತಿಯಾದವರ ಸಂಖ್ಯೆ | ಇಂದಿನ ಒಟ್ಟು ಬಿಡುಗಡೆ ಹೊಂದಿದವ ಸಂಖ್ಯೆ | ಒಟ್ಟು ಪ್ರತ್ಯೇಕಗೊಳಿಸಲಾಗಿರುವ ಸಂಖ್ಯೆ |
| 1 | ದಕ್ಷಿಣ ಕನ್ನಡ | 3 | 0 | 47 |
| 2 | ತುಮಕೂರು | 11 | 25 | 39 |
| 3 | ಬೆಂಗಳೂರು (ನಿಗದಿತ ಆಸ್ಪತ್ರೆಗಳು) | 0 | 5 | 34 |
| 4 | ಬೀದರ್ | 0 | 0 | 34 |
| 5 | ಕೊಪ್ಪಳ | 13 | 0 | 33 |
| 6 | ಮೈಸೂರು | 0 | 0 | 28 |
| 7 | ಬಳ್ಳಾರಿ | 0 | 0 | 25 |
| 8 | ಉಡುಪಿ | 5 | 0 | 24 |
| 9 | ಬಾಗಲಕೋಟೆ | 8 | 0 | 23 |
| 10 | ಉತ್ತರ ಕನ್ನಡ | 1 | 0 | 20 |
| 11 | ಬೆಂಗಳೂರು (ಆರ್.ಜಿ.ಐ.ಸಿ.ಡಿ) | 0 | 0 | 19 |
| 12 | ಕೊಡಗು | 10 | 0 | 16 |
| 13 | ಕಲಬುರ್ಗಿ | 0 | 7 | 14 |
| 14 | ಶಿವಮೊಗ್ಗ | 0 | 8 | 13 |
| 15 | ದಾರವಾಡ | 0 | 6 | 12 |
| 16 | ಚಿಕ್ಕಬಳ್ಳಾಪುರ | 0 | 24 | 5 |
| 17 | ಕೋಲಾರ | 1 | 0 | 4 |
| 18 | ದಾವಣಗೆರೆ | 1 | 0 | 4 |

| | | | | |
|---|---|---|---|---|
| 19 | ವಿಜಯಪುರ | 0 | 0 | 3 |
| 20 | ಹಾಸನ | 1 | 2 | 2 |
| 21 | ಯಾದಗಿರಿ | 0 | 0 | 2 |
| 22 | ಚಿತ್ರದುರ್ಗ | 0 | 0 | 2 |
| 23 | ಗದಗ | 1 | 0 | 2 |
| 24 | ರಾಮನಗರ | 1 | 0 | 1 |
| 25 | ಹಾವೇರಿ | 0 | 12 | 0 |
| 26 | ಚಿಕ್ಕಮಗಳೂರು | 0 | 1 | 0 |
| | **ಒಟ್ಟು** | **56** | **90** | **406** |

## ಇಂದಿನ ವಿಷಯಗಳು:

| | |
|---|---|
| 1) | ವಲಸೆ ಜನರಲ್ಲಿ ಅಥವಾ ಗುಂಪಿನಲ್ಲಿ ವಾಸಿಸುತ್ತಿರುವವರಲ್ಲಿ ಕೆಮ್ಮು / ಜ್ವರ ಪ್ರಕರಣಗಳು ವರದಿಯಾದಲ್ಲಿ ಕೋವಿಡ್–19 ವನ್ನು ತ್ವರಿತಗತಿಯಲ್ಲಿ ಪತ್ತೆ ಹಚ್ಚಲು Antibody ಆಧಾರಿತ ರಕ್ತ ಪರೀಕ್ಷೆಯನ್ನು ಪ್ರಾರಂಭಿಸುವಂತೆ Indian Council of Medical Research (ICMR) ಸಲಹೆ ನೀಡಿದೆ. |
| 4) | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ 31 ಜ್ವರ ಚಿಕಿತ್ಸಾಲಯದಲ್ಲಿ ದಿನಾಂಕ 04.04.2020 ರಂದು ಒಟ್ಟು 243 ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **1839** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ. |
| 5) | **Home Quarantine enforcement squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ದಿನಾಂಕ 04.04.2020 ರಂದು ಒಟ್ಟು 10 ವ್ಯಕ್ತಿಗಳನ್ನು ಸಂಸ್ಥೆಗಳಲ್ಲಿ ಕ್ವಾರಂಟೈನ್ ಮಾಡಿರುತ್ತಾರೆ. ಇದೂವರೆಗೂ ಒಟ್ಟಾರೆಯಾಗಿ **371** ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ನಿಗಧಿತ ಸಂಸ್ಥೆಗಳಲ್ಲಿ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ. |
| 6) | ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೋವಿಡ್–19 ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. **ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಸದರಿಯವರಿಗೆ** ಮಾನಸಿಕ ಆರೋಗ್ಯದ **ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ಕಲ್ಪಿಸುತ್ತಿದೆ. ಅದರಂತೆ,** ದಿನಾಂಕ **04.04.2020**ರಂದು ಒಟ್ಟು **1398** ಸಂಖ್ಯೆಯ ಮತ್ತು ಇಲ್ಲಿಯವರೆಗೂ ಒಟ್ಟಾರೆಯಾಗಿ **23,562** ಸಂಖ್ಯೆಯ **ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ನೀಡಲಾಗಿರುತ್ತದೆ.** |
| 7) | ನಿಜಾಮುದ್ದೀನ್ ಮರ್ಕಜ್ ಮಸೀದಿ, ನವ ದೆಹಲಿಯಲ್ಲಿ ಜರುಗಿದ **ತಬ್ಲಿಘಿ ಝಮಾತ್ ಧರ್ಮಸಭೆಯಲ್ಲಿ** ಭಾಗವಹಿಸಿದ ಪ್ರತಿಯೊಬ್ಬರು ಸಹ ಕಡ್ಡಾಯವಾಗಿ ರಾಜ್ಯ ಆರೋಗ್ಯ ಇಲಾಖೆಯ ಉಚಿತ ಆರೋಗ್ಯ ಸಹಾಯವಾಣಿ **080–29711171**ಕ್ಕೆ ಕರೆ ಮಾಡಿ ಸಂಪರ್ಕಿಸುವುದು. |
| 8) | ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್–19 ನಿಯಂತ್ರಣಕ್ಕೆ ಸ್ವಇಚ್ಚೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ ವೈದ್ಯರಿಗೆ ದೂರವಾಣಿ ಸಂಖ್ಯೆ 08047192219 ಗೆ ಮಿಸ್ಡ್ ಕಾಲ್ ನೀಡಲು ಅಥವಾhttps://forms.gle/TPbU7eZgazdxG9gS9ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ. |
| 9) | ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್ಪಾಂಡರ್ ಆಸ್ಪತ್ರೆಗಳ ಮಾಹಿತಿ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ. |
| 10) | ಕೋವಿಡ್–19 ಸಂಬಂಧಿತ ಎಲ್ಲಾ ರೀತಿಯ ಹೆಚ್ಚಿನ ಮಾಹಿತಿಗಾಗಿ ಉಚಿತ ಆರೋಗ್ಯ ಸಹಾಯವಾಣಿ ಸಂಖ್ಯೆ 104 ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ. |

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ **04.04.2020**ರಂದು 11,830 ಕರೆಗಳನ್ನು ಸ್ವೀಕರಿಸಲಾಗಿದೆ ಮತ್ತು 11 ಅಗತ್ಯ ಮಾರ್ಗದರ್ಶನದ ನೀಡುವ ಕರೆಗಳನ್ನು ಸೇರಿ ಒಟ್ಟು 16,947 ಹೊರ ಕರೆಗಳನ್ನು ಮಾಡಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ (ಸ್ಯಾನಿಟೈಸರ್) ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
***ಸಹಾಯವಾಣಿ ಸಂಖ್ಯೆ*** **9745697456, *080–46848600, 080–66692000 & 104***

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

***********